**<u>ಸಾಕ್ಷಿಗೆ ದಿನಾಂಕ 12-02-2026 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಆರೋಪಿ ಪರ ಶ್ರೀಮತಿ ಆರ ಪಿ ವಕೀಲರಿಂದಃ</u>**

1. ಈ ಪ್ರಕರದಲ್ಲಿ ಸಾಲವನ್ನು ಕಂಪನಿಗೆ ನೀಡಿರುತ್ತೇವೆ. ನಾವು ಆರೋಪಿ ಕಂಪನಿಗೆ ನೊಟೀಸ್ ನೀಡುವಾಗ ಅದನ್ನ ಪ್ರತಿನಿಧಿಸುವ ವ್ಯಕ್ತಿಗಳ ಹೆಸರನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಆರೋಪಿ ಕಂಪನಿಗೆ ರೂ.5,00,00/- ಮತ್ತು ಚಿಲ್ಲರೆ ಹಣವನ್ನು ಸಾಲ ನೀಡಿರುತ್ತೇವೆ. ಈ ದೂರನ್ನು ಮೂಲತಃ ನಾನು ಸಲ್ಲಿಸಿರುವುದಿಲ್ಲ. ಆರೋಪಿ ಕಂಪನಿಗೆ Emergency Credit Line Guarantee Scheme ನಡಿ ಸಾಲ ನೀಡಿರುತ್ತೇವೆ ಎಂದರೆ ನನಗೆ ಮಾಹಿತಿ ಇಲ್ಲ. ಆರೋಪಿ ಕಂಪನಿಗೆ ಸರ್ಕಾರಿ ಯೋಜನಯಾದ Emergency Credit Line Guarantee Scheme ನಡಿ ಸಾಲ ನೀಡುತ್ತಿದ್ದೇವೆ ಎಂದು ಮಂಜೂರಾತಿ ಪತ್ರದಲ್ಲಿ ನಮೂದಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಕೇಂದ್ರ ಸರ್ಕಾರವು ಸಾರ್ವಜನಿಕರು ಹೊಸ ಉದ್ಯಮೆಗಳನ್ನು ಪ್ರೋತ್ಸಾಯಿಸುವ ಸಲುವಾಗಿ ಸದರಿ ಯೋಜನಿಯಡಿ ಸಾಲ ಪಡೆಯುವ ಕಂಪನಿಯ ನಿರ್ದೇಶಕರು ಭದ್ರತೆಯನ್ನು ನೀಡಬೇಕಾಗಿರುವುದಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ.

2. ಆರೋಪಿ ಕಂಪನಿಯು ಈಗಲೂ ಕಾರ್ಯ ನಿರ್ವಹಿಸುತ್ತಿದೆಯೋ ಅಥವಾ ಸ್ಥಗಿತಗೊಂಡಿದೆಯೋ ನನಗೆ ಮಾಹಿತಿ ಇಲ್ಲ. ಮಾನ್ಯ ಎನ್ ಸಿ ಎಲ್ ಟಿ ಯು ಆರೋಪಿ ಕಂಪನಿಯನ್ನು ರದ್ದುಗೊಳಿಸಿ ಆದೇಶಿಸಿದೆ ಎಂದರೆ ನನಗೆ ಗೊತ್ತಿಲ್ಲ. ಒಂದು ವೇಳೆ ಕಂಪನಿಯು ದಿವಾಳಿಯಾದರೇ ಅಥವಾ ರದ್ದತಿಯಾದರೇ ಸದರಿ ಕಂಪನಿಯಿಂದ ಸಾಲ ಮರುಪಾವತಿಗಾಗಿ ನಿರ್ದೇಶಕರ ವಿರುದ್ಧ ಯಾವುದೇ ದೂರು ನೀಡುವಂತಿಲ್ಲ ಹಾಗೂ ದಿವಾಳಿ ಅಧಿನಿಯಮದನ್ವಯ ಸಾಲ ವಸೂಲಾತಿ ಮಾಡಿಕೊಳ್ಳಬೇಕು ಸರಿಯಲ್ಲ. ಒಂದು ವೇಳೆ ಕಂಪನಿಯು ರದ್ದತಿಯಾದರೇ ಅದು ಸಾಲವನ್ನು ಮರುಪಾವತಿಸುವುದಿಲ್ಲ ಎಂದರೆ ಸರಿಯಲ್ಲ.

3. ಎರಡನೇ ಆರೋಪಿಯು ಒಂದನೇ ಆರೋಪಿ ಕಂಪನಿಯ ಅಧೀಕೃತ ಕಾರ್ಯ ನಿರ್ವಾಹಕ ಅಧಿಕಾರಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಎರಡನೇ ಆರೋಪಿಯು ಪಿರ್ಯಾಧಿ ಕಂಪನಿಗೆ ವೈಯಕ್ತಿಕವಾಗಿ ಹಣ ಕಡಿತಗೊಳಿಸಲು ಸೂಚಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.3 ನ್ಯಾಚ್ ಮಾಂಡೇಟ್ ಆರೋಪಿ ಕಂಪನಿಯು ಖಾತೆಯನ್ನು ತಾತ್ಕಲಿಕವಾಗಿ ತಡೆಹಿಡಿಯಲಾಗಿದೆ ಎಂದು ಹಿಂಬರಹ ಬಂದಿದೆ ಎಂದರೆ ಸರಿ. ಈ ಕಾರಣಕ್ಕಾಗಿ ನ್ಯಾಚ್ ಮ್ಯಾಂಡೇಟ್ ಅಮಾನ್ಯಗೊಂಡಿದೆ ಎಂದು ಹೇಳಲು ಬರುವುದಿಲ್ಲ ಎಂದರೆ ಸರಿ. ತಾತ್ಕಲಿಕವಾಗಿ ತಡೆಹಿಡಿಯಲಾದ ಖಾತೆಗಳಲ್ಲಿ ಸಾಕಷ್ಟು ಹಣವಿದ್ದರೂ ವ್ಯವಹಾರ ಮಾಡುವಂತಿಲ್ಲ ಎಂದರೆ ಸರಿ. ಎರಡನೇ ಆರೋಪಿಯು ವೈಯಕ್ತಿಕವಾಗಿ ತನ್ನ ಸಹಿವುಳ್ಳ ಯಾವುದೇ ಚೆಕ್ಕನ್ನು ಪಿರ್ಯಾಧಿ ಕಂಪನಿಗೆ ನೀಡಿರುವುದಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಎರಡನೇ ಆರೋಪಿಯು ಪಿರ್ಯಾದಿ ಕಂಪನಿಗೆ ಯಾವುದೇ ಹಣ ನೀಡುವುದಿರುವುದಿಲ್ಲ ಎಂದರೆ ಸರಿಯಲ್ಲ. ಈ ಪಿರ್ಯಾಧಿಯನ್ನು ಪೇಮೆಂಟ್ ಮತ್ತು ಸೆಟ್ಲಮೆಂಟ್ ಕಾಯ್ದೆಯ ಕಲಂ 25 ರಡಿ ಸಲ್ಲಿಸಲಾಗಿದೆ ಎಂದರೆ ಸರಿ. ಲಘು ವ್ಯವಹಾರಗಳ ನ್ಯಾಯಾಂಗಣ-24 ಸಿಸಿ ನಂಬರ್ 10578/2021 ರಲ್ಲಿ ಇಂತಹ ಪ್ರಕರಣಗಳು ವಿಚಾರಣೆಗೆ ಯೋಗ್ಯವಾಗಿರುವುದಿಲ್ಲ ಎಂದು ಪಿರ್ಯಾದನ್ನು ತಿರಸ್ಕಾರ ಮಾಡಿರುತ್ತಾರೆ ಎಂದರೆ ನನಗೆ ಮಾಹಿತಿ ಇರುವುದಿಲ್ಲ.

**ಮರು-ವಿಚಾರಣೆಃ ಇಲ್ಲ**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**
**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**